# ಯೆಹೂದ್ಯರ ವಿಚಾರಣೆ ಮತ್ತು ಪೇತ್ರನು ಅರಿಯನೆಂದು ಹೇಳಿದ್ದು

## (26:57-75)

ಎಣ್ಣೆ ಮರಗಳ ಗುಡ್ಡದ ಮೇಲೆ ಆತನ ಬಂಧನದ ನಂತರ, ಯೇಸುವಿನ ಮಹಾಯಾಜಕನಾದ ಕಾಯಫನ ಬಳಿಗೆ ಕರೆದುಕೊಂಡು ಹೋದರು ಮತ್ತು ಅಲ್ಲಿಮಗ ಸನ್ಹೇದ್ರೀನ ಸಭೆಗೆ ಕರೆದುಕೊಂಡು ಹೋದರು, ಅಲ್ಲಿ ಆತನನ್ನು ವಿಚಾರಣೆಗೆ ಒಳಪಡಿಸಿದರು (26:57-68). ವಿಚಾರಣೆಯ ಫಲಿತಾಂಶವನ್ನು ನೋಡುವದಕ್ಕಾಗಿ, ಪೇತ್ರನು ದೂರದಿಂದ ಯೇಸುವನ್ನು ಹಿಂಬಾಲಿಸಿದನು. ಆತನು ಯೇಸುವಿನೊಂದಿಗೆ ಇದ್ದವನು ಎಂಬ ವಿಷಯದಲ್ಲಿ ವಿಚಾರಿಸಿದ್ದರಿಂದ, ಪೇತ್ರನು ಯೇಸುವನ್ನು ಮೂರು ಸಾರಿ ಅಲ್ಲಗಳೆನು (26:69-75).

### ಯೆಹೂದ್ಯರ ವಿಚಾರಣೆ (26:57-68)

**57ಯೇಸುವನ್ನು ಹಿಡಿದವರು ಆತನನ್ನು ಮಹಾಯಾಜಕನಾದ ಕಾಯಫನ ಬಳಿಗೆ ತೆಗೆದುಕೊಂಡು ಹೋದರು. 58ಅಲ್ಲಿ ಶಾಸ್ತ್ರಿಗಳೂ ಹಿರಿಯರೂ ಕೂಡಿ ಬಂದಿದ್ದರು. ಪೇತ್ರನಾದರೋ ದೂರದಿಂದ ಆತನ ಹಿಂದೆ ಹೋಗುತ್ತಾ ಮಹಾಯಾಜಕನ ಮಠದ ಅಂಗಳದ ತನಕ ಬಂದು ಒಳಗೆ ಹೊಕ್ಕು ಆತನ ಗತಿ ಏನಾಗುವದೋ ನೋಡಬೇಕೆಂದು ಓಲೇಕಾರರ ಸಂಗಡ ಕೂತುಕೊಂಡನು. 59ಆಗ ಮಹಾಯಾಜಕರೂ ಹಿರಿಯ ಸಭೆಯವರೆಲ್ಲರೂ ಯೇಸುವನ್ನು ಕೊಲ್ಲಿಸಬೇಕೆಂದು ಆತನ ಮೇಲೆ ಸುಳ್ಳುಸಾಕ್ಷಿಯನ್ನು ಹುಡುಕಿದರು; 60ಆದರೆ ಬಹುಮಂದಿ ಸುಳ್ಳುಸಾಕ್ಷಿಗಳು ಬಂದು ನಿಂತರೂ ಏನೂ ಸಿಕ್ಕಲಿಲ್ಲ. ಕಡೆಗೆ ಇಬ್ಬರು ಮುಂದೆ ಬಂದು - 61ನಾನು ದೇವರ ಆಲಯವನ್ನು ಕೆಡವಿಬಿಟ್ಟು ಮೂರು ದಿನಗಳಲ್ಲಿ ಕಟ್ಟಬಲ್ಲೆನೆಂದು ಇವನು ಹೇಳಿದನು ಅಂದರು; 62ಆಗ ಮಹಾಯಾಜಕನು ಎದ್ದುನಿಂತು - ನೀನೇನೂ ಉತ್ತರ ಹೇಳುವದಿಲ್ಲವೋ? ಇವರು ನಿನ್ನ ಮೇಲೆ ಹೇಳುವ ಈ ಸಾಕ್ಷಿ ಏನು ಎಂದು ಆತನನ್ನು ಕೇಳಿದನು. ಆದರೆ ಯೇಸು ಸುಮ್ಮನಿದ್ದನು. 63ಆಗ ಮಹಾಯಾಜಕನು - ನಿನಗೆ ಜೀವಸ್ವರೂಪನಾದ ದೇವರ ಆಣೆಯನ್ನು ಇಡುತ್ತೇನೆ; ನೀನು ದೇವಕುಮಾರನಾದ ಕ್ರಿಸ್ತನು ಹೌದೋ ಅಲ್ಲವೋ ಎಂಬುದನ್ನು ನಮಗೆ ಹೇಳಬೇಕು ಎಂದು ಅನ್ನಲಾಗಿ ಯೇಸು - 64ನೀನೇ ಹೇಳಿದ್ದೀ; ಇದಲ್ಲದೆ ಇನ್ನು ಮೇಲೆ ಮನುಷ್ಯಕುಮಾರನು ಸರ್ವಶಕ್ತನ ಬಲಗಡೆಯಲ್ಲಿ ಆಸೀನನಾಗಿರುವದನ್ನೂ ಆಕಾಶದ ಮೇಘಗಳ ಮೇಲೆ ಕುಳಿತು ಬರುವದನ್ನೂ ಕಾಣುವಿರಿ ಎಂದು ನಿಮಗೆ ಹೇಳುತ್ತೇನೆ ಅಂದನು. 65ಆಗ ಮಹಾಯಾಜಕನು ತನ್ನ ಬಟ್ಟೆಗಳನ್ನು ಹರಕೊಂಡು - ಇದು ದೇವದೂಷಣೆಯ ಮಾತು; ನಮಗೆ ಸಾಕ್ಷಿಗಳು ಇನ್ನು ಯಾತಕ್ಕೆ ಬೇಕು? ಇವನು ಈಗಲೇ ಆಡಿದ ದೂಷಣೆಯ ಮಾತನ್ನು ಕೇಳಿದಿರಲ್ಲಾ; 66ನಿಮಗೆ ಹೇಗೆ ತೋರುತ್ತದೆ? ಅನ್ನಲು ಇವನು ಮರಣದಂಡನೆ ಹೊಂದತಕ್ಕವನು ಎಂದು ಉತ್ತರಕೊಟ್ಟರು. 67ಆಗ ಆತನ ಮುಖದ ಮೇಲೆ ಉಗುಳಿ ಆತನನ್ನು ಗುದ್ದಿದರು; ಕೆಲವರು ಆತನ ಕೆನ್ನೆಗೆ ಏಟುಹಾಕಿ - 68ಕ್ರಿಸ್ತನೇ, ನಿನ್ನನ್ನು ಹೊಡೆದವರಾರು? ನಮಗೆ ಪ್ರವಾದನೆ ಹೇಳು ಅಂದರು.**

**ವಚನ 57.** ಯೋಹಾನ 18:12-24ರ ಪ್ರಕಾರ, ಯೇಸುವನ್ನು ಮೊದಲು ಹಿಂದೆ ಮಹಾಯಾಜಕನಾಗಿದ್ದ ಅನ್ನ ಕರೆದುಕೊಂಡು ಹೋದರು.[1] ಇದು ಜನರ ಮೇಲೆ ಅವನಿಗಿರುವ ಪ್ರಭಾವದ ಗೌರವಾರ್ಥವಾದಿ ಮಾಡಿದರು. ರೋಮನ್ ದೇಶಾಧಿಪತಿ Valerius Gratus ಅವನನ್ನು ಕ್ರಿ.ಶ. 15ರಲ್ಲಿ ಅಧಿಕಾರದಿಂದ ತೆಗೆದು ಹಾಕಿದ್ದರು ಸಹ ಅನೇಕ ಯೆಹೂದ್ಯರು ಆತನನ್ನು ಇನ್ನೂ ಮಹಾಯಾಜಕನೆಂದು ಪರಿಗಣಿಸುತ್ತಿದ್ದರು (ನೋಡಿರಿ ವ್ಯಾಖ್ಯಾನ 26:3). ಅನ್ನನು ಯೇಸುವನ್ನು ಆತನ ಶಿಷ್ಯರ ಮತ್ತು ಆತನ ಬೋಧನೆಯ ಕುರಿತಾಗಿ ವಿಚಾರಿಸಿ ಆತನನ್ನು ತನ್ನ ಅಳಿಯನಾದ ಕಾಯಫನ ಬಳಿಗೆ ಕಳುಹಿಸಿದನು.[2]

ಮತ್ತಾಯನು ಈ ವಿವರಗಳನ್ನು ಸೇರಿಸಿಲ್ಲ, **ಯೇಸುವನ್ನು ಹಿಡಿದವರು ಆತನನ್ನು ಮಹಾಯಾಜಕನಾದ ಕಾಯಫನ ಬಳಿಗೆ ತೆಗೆದುಕೊಂಡು ಹೋದರು.** ಅಲ್ಲಿ ಶಾಸ್ತ್ರಿಗಳು, ಹಿರಿಯರೂ ಕೂಡಿ ಬಂದಿದ್ದರು ಎಂದು ವರದಿ ಮಾಡಿದ್ದಾನೆ. ಬಂಧನವು ಸನ್ನಿಹಿತವಾಗಿರುವದನ್ನು ತಿಳಿದು, ಕೆಲವು ಸನ್ಹೆಡ್ರೀನ್ ಸದಸ್ಯರು ಕಾಯಫನ ಮನೆಯ ಬಳಿಯಲ್ಲಿ ಸೇರಿ ಬಂದಿದ್ದರು. ಕಾಯಫನ ಯೇಸುವನ್ನು ಪರೀಕ್ಷಿಸಿದನು ಮತ್ತು ತನ್ನ ಮನಸ್ಸಿನಲ್ಲಿ ಪೂರ್ಣ ಸನ್ಹೇಡ್ರಿನ್ ಕೂಡಿಬಂದಾಗ ಏನು ಹೇಳಬೇಕು ಎಂದು ಮನಸ್ಸಿನಲ್ಲಿ ನಿರ್ಧರಿಸಿದ್ದನು ಎಂಬುದರಲ್ಲಿ ಸಂದೇಹವಿಲ್ಲ. ಅವನೊಂದಿಗೆ ನಡೆದ ಈ ಸಂದರ್ಶನದಲ್ಲಿ ಆತನು ಯೇಸುವನ್ನು ಸನ್ಹೇಡ್ರಿನ್ ಸಭೆಯ ಮುಂದೆ ನಿಲ್ಲುವದಕ್ಕೆ ಕಳುಹಿಸಿದನು.

Mishnah ಪ್ರಕಾರ, ಸುಳ್ಳು ಪ್ರವಾದಿಯೆಂದು ಪರಿಗಣಿಸಲ್ಪಡುವ ಮನುಷ್ಯನಿಗೆ ತೀರ್ಪನ್ನು ನೀಡುವಾಗ ಸಂಪೂರ್ಣ ಸಮಿತಿಯು ಹಾಜರಿರಬೇಕಿತ್ತು.[3] ಆದಾಗ್ಯೂ, ಈ ಘಟನೆಯಲ್ಲಿ ಆ ನಿಯಮವನ್ನು ಪಾಲಿಸಲಿಲ್ಲ, ಅರಿಮತ್ತಾಯದ ಯೋಸೇಫನು ಈ ಸಮಿತಿಯ ಸದಸ್ಯನಾಗಿದ್ದನು (ಮಾರ್ಕ 15:43; ಲೂಕ 23:50). ಬಹುಶಃ ನಿಕೋದೇಮನು ಸಹ (ಯೋಹಾನ 3:1; 7:50, 51; 19:38, 39). ಆ ರಾತ್ರಿಯಲ್ಲಿ ಇಬ್ಬರು ಸಹ ಖಂಡಿತವಾಗಿ ಅಲ್ಲಿರಲಿಲ್ಲ (ನೋಡಿರಿ ಲೂಕ 23:51, 52).

ಯೇಸುವನ್ನು ಸಂಪೂರ್ಣ ಸಭೆಯ ಮುಂದೆ ಕೊನೆಯ ತೀರ್ಪನ್ನು ನೀಡಲು ತರಲಾಯಿತು (27:1; ಮಾರ್ಕ 15:1; ಲೂಕ 22:66). ಸಮಿತಿಯು ಎಪ್ಪತ್ತ-ಒಂದು ಸದಸ್ಯರನ್ನು ಒಳಗೊಂಡಿತ್ತು; ಕ್ರಮಬದ್ಧವಾದ ಎಪ್ಪತ್ತು ಸದಸ್ಯರು ಮತ್ತು ಮಹಾಯಾಜಕನು ಅವನು ಮುಖ್ಯ ನ್ಯಾಯಾಧಿಪತಿಯಾಗಿದ್ದನು. ಈ ಸಂಖ್ಯೆಯು ದೇವರು ಮೋಶೆಗೆ ಸಹೋಯವಾಗುವಂತೆ ಎಪ್ಪತ್ತು ಜನ ನ್ಯಾಯಾಧಿಪತಿಗಳನ್ನು ನೇಮಿಸಲು ಹೇಳಿರುವ ಆದೇಶಕ್ಕನುಗುಣವಾಗಿತ್ತು (ಅರಣ್ಯಕಾಂಡ 11:16).[4] ಅವರು ಅರ್ಧ ವೃತ್ತಾಕಾರದಲ್ಲಿ ಕುಳಿತುಕೊಳ್ಳುತ್ತಿದ್ದರು, ಇದರಿಂದಾಗಿ ಎಲ್ಲಾ ಸದಸ್ಯರನ್ನು ಪ್ರತಿಯೊಬ್ಬರನ್ನು ನೋಡಬಹುದಾಗಿತ್ತು. ಇಬ್ಬರು ಗುಮಾಸ್ತರು ಗುಂಪಿಗೆ ಎದುರಾಗಿ ಕುಳಿತುಕೊಳ್ಳುತ್ತಿದ್ದರು; ಒಬ್ಬನು ಬಿಡುಗಡೆ ಮಾಡುವದರ ಪರವಾಗಿ ದಾಖಲಿಸುತ್ತಿದ್ದನು ಇನ್ನೊಬ್ಬನು ಅಪರಾಧವನ್ನು ನಿರ್ಣಯಿಸುವ ವಾದದ ಪರವಾಗಿ ದಾಖಲಿಸುತ್ತಿದ್ದನು. ಪ್ರತಿಯೊಬ್ಬ ಸದಸ್ಯರು ವೈಯಕ್ತಿಕವಾಗಿ ತೀರ್ಪನ್ನು ನೀಡುತ್ತಿದ್ದರು.[5]

ಈ ಯೆಹೂದ್ಯರು, ತಮ್ಮ ಧರ್ಮಶಾಸ್ತ್ರವನ್ನು ಅನುಸರಿಸುವದರಲ್ಲಿ ಅತಿಜಾಗರೂಕರಾಗಿರುತ್ತಿದ್ದರು ಇವರು ಸಂಪೂರ್ಣವಾಗಿ ಅಪರಾಧಿಯೆಂದು ನಿರ್ಣಯಿಸುವದನ್ನು ಉದಾಸೀನಮಾಡಿದರು. (1) ಅವರು ಯೇಸುವನ್ನು ರಾತ್ರಿಯಲ್ಲಿ ಬಂಧಿಸಿದರು ಮತ್ತು ಬೆಳಗಾಗುವದಕ್ಕಿಂತ ಮುಂಚಿತವಾಗಿ ಮಹಾಯಾಜಕನ ಬಳಿ ಕರೆ ತಂದರು ಮತ್ತು ಮಾಡಬೇಕಾದ ಅನೇಕ ಕ್ರಮಗಳನ್ನು ಅಲಕ್ಷಮಾಡಿದರು.[6] (2) ನ್ಯಾಯಯುತವಾದ ಕ್ರಮಗಳು ನ್ಯಾಯಸ್ಥಾನದ ಕಟ್ಟೆಯ ಮೇಲೆ ದೇವಾಲಯದ ಮಿತಿಯಲ್ಲಿ ನಡೆಯಬೇಕಿತ್ತು.[7] - ಖಚಿತವಾಗಿಯೂ ಮಹಾಯಾಜಕನ ಮನೆಯಲ್ಲಿ ಅಲ್ಲ. (3) ಮರಣದಂಡನೆಯ ವಿಷಯಗಳನ್ನು ಸಬ್ಬತ್ ದಿನದ ಸಂಜೆ ಅಥವಾ ಹಬ್ಬದಂದು ವಿಚಾರಿಸಬಾರದಾಗಿತ್ತು.[8] (4) ಅವರು ಸಾಕ್ಷಿಗಳನ್ನು ಅವರ ಸಾಕ್ಷಿ ಸ್ವೀಕರಿಸಲ್ಪಟ್ಟಿದೆ ಎಂಬುದನ್ನು ಖಚಿತಪಡಿಸಿಕೊಳ್ಳಲು

ಅವರನ್ನು ಪ್ರತ್ಯಕ್ಷವಾಗಿ ವಿಚಾರಿಸುವದನ್ನು ಅಲಕ್ಷಿಸಿದರು.[9] (5) ಸಾಮಾನ್ಯವಾಗಿ ಮರಣದಂಡನೆಯ ತೀರ್ಪನ್ನು ನಿರ್ಧರಿಸಿದ್ದಲ್ಲಿ, ಅದನ್ನು ಅಧಿಕೃತವಾಗಿ ಪ್ರಕಟಿಸಬೇಕಾದರೆ ಸಂಪೂರ್ಣ ರಾತ್ರಿ ಕಳೆಯಬೇಕಾಗಿತ್ತು.[10]

**ವಚನ 58. ಪೇತ್ರನು ಯೇಸುವನ್ನು ದೂರದಿಂದ ಹಿಂಬಾಲಿಸುತ್ತಿದ್ದನು, ಆದರೆ ಆತನು ಮಹಾಯಾಜಕನ** ಮಠದ ಅಂಗಳದಲ್ಲಿ[11] ಕಾಯ್ದುಕೊಂಡಿದ್ದನು. ಗೆತ್ಸೇಮನೆಯಲ್ಲಿ ನಡೆದ ಘಟನೆಗಳಿಂದ ಅವನು ಎಷ್ಟು ಗಲಿಬಿಲಿಗೆ ಒಳಗಾಗಿರಬಹುದು? 26:56ರಲ್ಲಿ "ಎಲ್ಲಾ ಶಿಷ್ಯರು ಯೇಸುವನ್ನು ಬಿಟ್ಟು ಓಡಿಹೋದರು" ಎಂದು ಹೇಳುತ್ತದೆ, ನಾವು ಪೇತ್ರನು ಸಹ ಓಡಿಹೋದನು ಎಂದು ಊಹಿಸುತ್ತೇವೆ. ಅದಾಗ್ಯೂ, ಆತನು ತಿರುಗಿ ಬಂದು, ಸುರಕ್ಷಿತವಾದ ಅಂತರದಲ್ಲಿ ಜನಸಮೂಹವನ್ನು ಹಿಂಬಾಲಿಸುತ್ತಿದ್ದನು, ಅಪರಿಚಿತನಾಗಿರುವ ಪ್ರಯತ್ನವನ್ನು ಮಾಡುತ್ತಿದ್ದನು.

ಅಂಗಳದಲ್ಲಿರುವಾಗ, ಪೇತ್ರನು **ಅಧಿಕಾರಿಗಳೊಂದಿಗೆ ಕುಳಿತುಕೊಂಡನು.** ಮತ್ತು ಬೆಂಕಿಯಿಂದ ಚಳಿಕಾಯಿಸಿಕೊಳ್ಳುತ್ತಿದ್ದನು (ಯೋಹಾನ 18:18), ಯೇಸುವಿನ ವಿಚಾರಣೆಯ ಫಲಿತಾಂಶವನ್ನು ನೋಡುವದಕ್ಕಾಗಿ ಕಾದಿದ್ದನು. "ಅಧಿಕಾರಿಗಳು" ಎಂಬುದಕ್ಕೆ ಬದಲಾಗಿ, ಇತರ ಭಾಷಾಂತರಗಳು "ಕಾವಲುಗಾರರು" (NIV; NRSV) ಅಥವಾ "ಸೇವಕರು" (NEB; NJB) ಎಂದಿದೆ. ಗ್ರೀಕ್ ಪದ *hupēretēs* ಸಾಮಾನ್ಯವಾಗಿ ತನ್ನ ಅಧಿಕಾರಕ್ಕೆ ಒಳಪಟ್ಟಿರುವ ಇನ್ನೊಬ್ಬರಿಗೆ ಸಹಾಯ ಮಾಡುವವರನ್ನು ಉಲ್ಲೇಖಿಸುತ್ತದೆ.

ಜನ ಸಮೂಹವನ್ನು ಹಿಂಬಾಲಿಸಿದ ಇನ್ನೊಬ್ಬ ಶಿಷ್ಯನು ಯೋಹಾನನಾಗಿರಬಹುದು ಎಂಬ ನಂಬಿಕೆಯಿದೆ, ಆತನು ಮೊದಲು ಅಂಗಳವನ್ನು ಪ್ರವೇಶಿಸಿದನು. ಆತನು ಬಾಗಿಲು ಕಾಯುವವನೊಟ್ಟಿಗೆ ಮಾತನಾಡಿದನು ಅವನು ನಂತರ ಪೇತ್ರನನ್ನು ಒಳಗೆ ಹೋಗಲು ಅನುಮತಿಸಿದನು (ಯೋಹಾನ 18:15, 16). ಪೇತ್ರ ಮತ್ತು ಯೋಹಾನರು ಈ ಘಟನೆಗಳಿಗೆ ಜೀವಂತ ಸಾಕ್ಷಿಯಾಗಿದ್ದರು. ಬಹುಶಃ ಅವರು ಈ ಮಾಹಿತಿಯನ್ನು ಮತ್ತಾಯನೊಂದಿಗೆ ಮತ್ತು ಇತರ ಶಿಷ್ಯರೊಂದಿಗೆ ಹಂಚಿಕೊಂಡಿರಬಹುದು.

**ವಚನ 59.** ಯೇಸು ಯಾವ ಅಪರಾಧವನ್ನು ಮಾಡದೇ ಇದದ್ದರಿಂದ, **ಮಹಾಯಾಜಕರೂ** ಮತ್ತು ಸನ್ಹೇದ್ರಿನ ಕೂಟದ ಇತರ ಸದಸ್ಯರು ಆತನ ವಿರುದ್ಧವಾಗಿ **ಸುಳ್ಳುಸಾಕ್ಷಿಯನ್ನು ಹೇಳುವದಕ್ಕೆ** ಅಪ್ರಾಮಾಣಿಕ ಮನುಷ್ಯರನ್ನು ಹುಡುಕಬೇಕಾಯಿತು ಅವರಿಗೆ ಮರಣ ದಂಡನೆಯನ್ನು ವಿಧಿಸುವ ಅಧಿಕಾರವಿಲ್ಲದ್ದರಿಂದ (ನೋಡಿರಿ ವ್ಯಾಖ್ಯಾನ 1:19; 10:18; 12:14),[12] ಅವರು ರೋಮನ್ **ದೇಶಾಧಿಪತಿಯು** ಯೇಸುವನ್ನು **ಮರಣ** ಯೋಗ್ಯನೆಂದು ಗ್ರಹಿಸಿಕೊಳ್ಳುವಂತೆ ದೂರನ್ನು ಹುಡುಕಬೇಕಾಯಿತು. ಸಂಪೂರ್ಣ ಮಂಡಲಿ ಎಂಬ ವಾಕ್ಯಭಾಗವನ್ನು ಇಲ್ಲಿ ಬಹಳ ವಾಸ್ತವವಾಗಿ ತೆಗೆದುಕೊಳ್ಳಬೇಕಾಗಿಲ್ಲ. ಮತ್ತಾಯನು ಬಹುಶ ಈ ದಿವಸ ಅಲ್ಲಿ ಸೇರಿ ಬಂದ ಪ್ರತಿಯೊಬ್ಬ ಸದಸ್ಯರು ಆತನನ್ನು ವಿರೋಧಿಸುವವರಾಗಿದ್ದರು ಎಂದು ಹೇಳುತ್ತಿರಬಹುದು.[13]

**ವಚನಗಳು 60, 61.** ಮೊದಲು **ಬಹುಮಂದಿ ಸುಳ್ಳುಸಾಕ್ಷಿಗಳು ಬಂದು ನಿಂತರೂ,** ಆದರೆ ಸಾಕ್ಷಿಗಳು ಒಪ್ಪಿಗೆಯಾಗಲಿಲ್ಲ (ಮಾರ್ಕ 14:55, 56). ಧರ್ಮಶಾಸ್ತ್ರದ ಪ್ರಕಾರ, ಒಬ್ಬ ಮನುಷ್ಯನನ್ನು ಎರಡು ಅಥವಾ ಮೂರು ಸಮಂಜಸವಾದ ಸಾಕ್ಷಿಗಳಿವೆ ಮರಣ ದಂಡನೆಯನ್ನು ವಿಧಿಸುವದು ಸಾಧ್ಯವಿರಲಿಲ್ಲ (ಅರಣ್ಯಕಾಂಡ 35:30; ಧರ್ಮೋಪದೇಶ ಕಾಂಡ 17:6; 19:15). ಕೆಲವು ಸಮಯದ ನಂತರ, **ಇಬ್ಬರು** ಸಾಕ್ಷಿಗಳಲ್ಲಿ ಇಬ್ಬರು ಯೇಸುವಿನ ಕುರಿತಾಗಿ ಹೀಗೆ ಹೇಳಿದರು: **ನಾನು ದೇವರ ಆಲಯವನ್ನು ಕೆಡವಿಬಿಟ್ಟು ಮೂರು ದಿನಗಳಲ್ಲಿ ಕಟ್ಟಬಲ್ಲೆನೆಂದು ಇವನು ಹೇಳಿದನು ಅಂದರು** (ನೋಡಿರಿ 27:40). ಆದಾಗ್ಯೂ, ಅವರು ಹೇಳಿದ ಕತೆಯು ಸಮಂಜಸವಾಗಿರಲಿಲ್ಲ (ಮಾರ್ಕ 14:59).

ದೇವಾಲಯದ ವಿರೋಧವಾಗಿ ಮಾತನಾಡುವದು ದೊಡ್ಡ ಅಪರಾಧವೆಂದು

ಯೆಹೂದ್ಯರು ಪರಿಗಣಿಸುತ್ತಿದ್ದರು (ಅಪೊಸ್ತಲರ ಕೃತ್ಯಗಳು 6:12-14). ಯೇಸು ಖಾಸಗಿಯಾಗಿ ದೇವಾಲಯದ ನಾಶನದ ಕುರಿತಾಗಿ ಪ್ರವಾದಿಸಿದಾಗ (24:1, 2), ಆತನು ಅದನ್ನು ಮೂರು ದಿವಸದಲ್ಲಿ ಕಟ್ಟುವ ವಿಚಾರವಾಗಿ ಮಾತನಾಡಿರಲಿಲ್ಲ. ಆತನು ಯೆಹೂದ್ಯರು "ದೇವಾಲಯವನ್ನು" ನಾಶಮಾಡುವವರು ಎಂಬುದಾಗಿ ಹೇಳಿದನು (ಯೋಹಾನ 2:19). ಆದರೂ, ದೇವಾಲಯವನ್ನು ತನ್ನ ದೇಹಕ್ಕೆ ಉಲ್ಲೇಖಿಸಿದ್ದನು; ಆತನು ತನ್ನ ಮರಣ ಮತ್ತು ಪುನರುತ್ಥಾನವನ್ನು ಸೂಚಿಸಿದ್ದನು (ಯೋಹಾನ 2:21, 22).

**ವಚನಗಳು 62, 63. ಮಹಾಯಾಜಕನು** ಎದ್ದು ನಿಂತು ಯೇಸುವಿಗೆ ತನ್ನ ಪರವಾಗಿ ಹೇಳಿದಾಗ, ಮೊದಲು ಆತನು **ಸುಮ್ಮನಿದ್ದನು.** ಇದು ಯೆಶಾಯ 53:7ರ ಪ್ರವಾದನೆಯಲ್ಲಿ ನೆರವೇರಿಕೆಯಾಗಿದೆ:

> ಅವನು ಬಾಧೆಗೆ ಒಳಗಾಗಿ ತನ್ನನ್ನು ತಗ್ಗಿಸಿ
> ಕೊಂಡನು, ಬಾಯಿ ತೆರೆಯಲಿಲ್ಲ;
> ವಧ್ಯಸ್ಥಾನಕ್ಕೆ ಒಯ್ಯಲ್ಪಡುವ ಕುರಿಯಂತೆಯೂ
> ಉಣ್ಣೆ ಕತ್ತರಿಸುವವರ ಮುಂದೆ ಮೌನವಾಗಿ
> ರುವ ಕುರಿಯ ಹಾಗೂ ಇದ್ದನು, ಬಾಯಿ ತೆರೆಯಲೇ ಇಲ್ಲ.

ಇದಕ್ಕೆ ಸಮನಾಗಿರುವ ಭಾಷೆಯು ಕೀರ್ತನೆ 38:12-14ರಲ್ಲಿ ಕಂಡುಬರುತ್ತದೆ.

ಯೇಸುವಿನ ಮೌನವು ಖಂಡಿತವಾಗಿಯೂ ಸನ್ಹೇದಿನ್ ಸಭೆಯ ಮೇಲೆ ದೊಡ್ಡ ಪರಿಣಾಮ ಬೀರಿತು. ಸಾಮಾನ್ಯವಾಗಿ ಅಪರಾಧಿಯು ತಾನು ನಿರಪರಾಧಿಯೆಂದು ವಾದಿಸುತ್ತಾ ತನ್ನ ಮೇಲೆ ಹೊರಿಸುವ ಪ್ರತಿಯೊಂದು ಅಪರಾಧಕ್ಕೂ ಪ್ರತಿಕ್ರಿಯಿಸುತ್ತಾನೆ, ಆದರೆ ಯೇಸು ಏನೂ ಹೇಳಲಿಲ್ಲ.[14] ಆತನು ಕ್ರೂಜೆಗೆ ಹೋಗಲು ಸಮರ್ಪಿಸಿಕೊಂಡಿದ್ದನು. ಆದುದರಿಂದ ಆತನಿಗೆ ತನ್ನನ್ನು ತಾನು ಸಮರ್ಥಿಸಿಕೊಳ್ಳುವ ಅಗತ್ಯತೆ ಇರಲಿಲ್ಲ.

ಯೇಸುವಿನ ಮೌನಕ್ಕೆ ಪ್ರತ್ಯುತ್ತರವಾಗಿ ಮಹಾಯಾಜಕನು - **ನಿನಗೆ ಜೀವಸ್ವರೂಪನಾದ ದೇವರ ಆಣೆಯನ್ನು ಇಡುತ್ತೇನೆ; ನೀನು ದೇವಕುಮಾರನಾದ ಕ್ರಿಸ್ತನು ಹೌದೋ ಅಲ್ಲವೋ ಎಂಬುದನ್ನು ನಮಗೆ ಹೇಳಬೇಕು ಎಂದನು.** ಧರ್ಮಶಾಸ್ತ್ರದ ಪ್ರಕಾರ, ನ್ಯಾಯಾಧೀಶನಿಗೆ ಸಾಕ್ಷಿಯನ್ನು ಮಾತನಾಡುವಂತೆ ಒತ್ತಾಯಿಸುವ ಹಕ್ಕು ಇರುತ್ತದೆ (ಯಾಜಕಕಾಂಡ 5:1).[15] ಅನುವಾದಿಸಲ್ಪಟ್ಟ ಗ್ರೀಕ್ ಪದದ ಅರ್ಥ "ಯಾರಿಗಾದರು ಆಣೆಯಿಡಲು ಕಾರಣವಾಗುವದು" (*exorkizō*) ಅಥವಾ "ಪ್ರಮಾಣದಡಿಯಲ್ಲಿ ಅಪ್ಪಣೆ ಮಾಡುವದು." NRSV "ನಾನು ಜೀವಸ್ವರೂಪನಾದ ದೇವರ ಆಣೆಯನ್ನು ನಿನಗೆ ಇಡುತ್ತೇನೆ."

ಕಾಯಫನು ಯೇಸುವಿನ ವಿರುದ್ಧ ಮರಣದಂಡನೆಯ ತೀರ್ಪನ್ನು ನೀಡಲು ಭೂಮಿಕೆಯನ್ನು ಸಿದ್ಧಮಾಡಲು ಪ್ರಯತ್ನಿಸುತ್ತಿದ್ದನು. ಒಂದು ವೇಳೆ ಆತನು ತಾನು "ಕ್ರಿಸ್ತನು" ಯೆಹೂದ್ಯರ ಅರಸನು ಎಂದು ಹೇಳಿಕೊಂಡರೆ ಅದು ರೋಮಾ ಸರಕಾರದ ವಿರುದ್ಧವಾಗಿ ದೇಶದ್ರೋಹವಾಗುತ್ತಿತ್ತು (ನೋಡಿರಿ ಅಪೊಸ್ತಲರ ಕೃತ್ಯಗಳು 17:7). ಒಂದು ವೇಳೆ ಆತನು ತಾನು "ದೇವಕುಮಾರನು" ಎಂದು ಹೇಳಿಕೊಂಡರೆ ಅದು ಯೆಹೂದ್ಯರಿಗೆ ದೇವದೂಷಣೆಯಾಗುತ್ತಿತ್ತು.

ಹಳೆ ಒಡಂಬಡಿಕೆಯಲ್ಲಿ, ಇಸ್ರಾಯೇಲರ ಅರಸನನ್ನು "ದೇವರ ಮಗ" ದತ್ತು ಮಗ ಎಂದು ದೃಷ್ಟಿಸುತ್ತಿದ್ದರು (ಕೀರ್ತನೆ 2:12). ಒಂದು ದಿವಸ ತನ್ನ ರಾಜ್ಯಾಭಿಷೇಕದಂದು, ಆತನು ಭೂಮಿಯ ಮೇಲೆ ದೇವರ ಪ್ರತಿನಿಧಿಯಾಗುತ್ತಾನೆ. ಯೇಸುವನ್ನು ರಾಜಾಧಿರಾದನು ಎಂದು ಹೇಳುವಾಗ "ದೇವರ ಮಗ" ಇದು ಆತನ ವ್ಯಕ್ತಿತ್ವವನ್ನು ಸೂಚಿಸುತ್ತದೆ (3:17; 4:3, 6; 8:29; 14:33; 16:16; 27:40, 43, 54).

**ವಚನ 64.** ಯೇಸು ಮಹಾಯಾಜಕನ ಪ್ರಶ್ನೆಗೆ ಉತ್ತರಿಸಲು ವಿಫಲನಾಗಿದ್ದಲ್ಲಿ, ಮೌನ ಸಮ್ಮತಿಯ ಸೂಚನೆಯೆಂದು ಆತನು ಕ್ರಿಸ್ತನಲ್ಲ ಎಂದು ವಿವರಿಸಲಾಗುತಿತ್ತು. ಆತನಿಗೆ ತಿಳಿದಿತ್ತು, ಆದಾಗ್ಯೂ ಆತನು ಸತ್ಯವನ್ನೇ ಹೇಳಿದಾಗಲೂ, ಆತನ ಮಾತುಗಳನ್ನು ಆತನ ವಿರುದ್ಧವಾಗಿ ಉಪಯೋಗಿಸಿದರು.

**ಯೇಸು** ಮಹಾ ಯಾಜಕನಿಗೆ **ಅದನ್ನು ನೀನೇ ಹೇಳಿದ್ದೀ** ಎಂದು ಪ್ರತಿಕ್ರಿಯೆ ನೀಡಿದನು. ಇದು ಪರೋಕ್ಷವಾಗಿ "ಹೌದು" ಎಂದು ಉತ್ತರಿಸುವದಾಗಿದೆ. ಅದು ಪ್ರಶ್ನೆಮಾಡುವವನ ಮೇಲೆ ಒತ್ತು ನೀಡುತ್ತದೆ. ಈ ಅಧ್ಯಾಯದಲ್ಲಿ ಹಿಂದೆ, ಯೇಸು ಯೂದನಿಗೆ ಇದೇ ರೀತಿಯಲ್ಲಿ ಉತ್ತರಿಸಿದ್ದನು (26:25).

ನಂತರ ಯೇಸು ತಾನು ಹೇಳಿದ್ದನ್ನು, **ಇನ್ನು ಮೇಲೆ ಮನುಷ್ಯಕುಮಾರನು ಸರ್ವಶಕ್ತನ ಬಲಗಡೆಯಲ್ಲಿ ಆಸೀನನಾಗಿರುವದನ್ನೂ ಆಕಾಶದ ಮೇಘಗಳ ಮೇಲೆ ಕುಳಿತು ಬರುವದನ್ನೂ ಕಾಣುವಿರಿ ಎಂದು ನಿಮಗೆ ಹೇಳು ತ್ತೇನೆ ಅಂದನು.**[16] ಸೈನ್ಯದೊಂದಿಗೆ ಗುರುತಿಸಿಕೊಳ್ಳುವದರ ಬದಲಾಗಿ ಮೆಸ್ಸೀಯನು ಜನರನ್ನು ನಿರೀಕ್ಷಿಸಿದನು, ಯೇಸು ತನ್ನನ್ನು ತಾನು ಕರ್ತನು ಮತ್ತು ಎಲ್ಲದರ ನ್ಯಾಯಾಧಿಪತಿಯು ಎಂದು ಚಿತ್ರಿಸಿಕೊಂಡನು. ಆತನು ಈ ಅರಿಕೆಯನ್ನು ಆತನ ಪ್ರಸ್ತುತ ಪರಿಸ್ಥಿತಿಯೊಂದಿಗೆ ಹೊಂದಿಕೊಳ್ಳದಿದ್ದರೂ ಧೈರ್ಯದಿಂದ ಇದನ್ನು ಹೇಳಿಕೊಂಡನು.[17]

ಯೇಸು ದಾನಿಯೇಲ 7:13, 14 ಮತ್ತು ಕೀರ್ತನೆ 110:1ರಲ್ಲಿರುವ ವರ್ಣನೆಯನ್ನು ಜೋಡಿಸುತ್ತಾನೆ. ದಾನಿಯೇಲ 7ರಲ್ಲಿ ಮನುಷ್ಯಕುಮಾರನು ಆಕಾಶದ ಮೇಘಗಳಲ್ಲಿ ಬರುತ್ತಾನೆ, ಪ್ರಾಚೀನ ದಿನಗಳನ್ನು ಸಮೀಪಿಸುತ್ತಿರುವನು (ತಂದೆಯಾದ ದೇವರನ್ನು) ನಾಶವಾಗಲಾರದ ರಾಜ್ಯವನ್ನು ಹೊಂದಿಕೊಳ್ಳುವದಕ್ಕಾಗಿ (24:30). ಕೀರ್ತನೆ 110 ಮೆಸ್ಸೀಯನ ಕುರಿತಾದ ಕೀರ್ತನೆ ಕರ್ತನು ದೇವರ ಬಲಗಡೆಯಲ್ಲಿ ಆಸೀನನಾಗಿದ್ದಾನೆ, ಜನಾಂಗಗಳನ್ನು ಆಳುತ್ತಾನೆ (ನೋಡಿರಿ 22:42-45). ಇಲ್ಲಿ ಯೇಸು "ಬಲ" ಎಂಬ ಪದವನ್ನು ಎರಡನೆಯ ಶತಮಾನದ ನಂತರ ಯೆಹೂದ್ಯರು ಉಚ್ಚರಿಸಲು ಹಿಂಜರಿಯುತ್ತಿದ್ದ ಬಳಸುಮಾತಿನ ಹೆಸರನ್ನು ಇಲ್ಲಿ ಉಪಯೋಗಿಸುತ್ತಿದ್ದಾನೆ.[18]

**ವಚನಗಳು 65, 66.** ಯೇಸು ತನ್ನ ವೈರಿಗಳಿಗೆ ಸತ್ಯವನ್ನು ಹೇಳುವದರ ಮೂಲಕ ತನ್ನ ಮೇಲೆ ಅಪರಾಧವನ್ನು ಹೊರಿಸಿಕೊಂಡನು. ಆತನ ಸಾಕ್ಷಿಗೆ ಪ್ರತ್ಯುತ್ತರವಾಗಿ, **ಆಗ ಮಹಾಯಾಜಕನು ತನ್ನ ಬಟ್ಟೆಗಳನ್ನು ಹರಕೊಂಡು - ಇದು ದೇವದೂಷಣೆಯ ಮಾತು; ನಮಗೆ ಸಾಕ್ಷಿಗಳು ಇನ್ನು ಯಾತಕ್ಕೆ ಬೇಕು?** ಸಾಮಾನ್ಯವಾಗಿ ಹೇಳಬೇಕಾದರೆ, ದೇವರು ಯಾಜಕರಿಗೆ ತಮ್ಮ ಬಟ್ಟೆಗಳನ್ನು ಹರಿದುಕೊಳ್ಳಬಾರದು ಎಂದು ಹೇಳಿದನು (ಯಾಜಕಕಾಂಡ 10:6; 21:10). ಆದಾಗ್ಯೂ, ಯೆಹೂದಿ ಸಂಪ್ರದಾಯಕ್ಕೆ ಅನುಸಾರವಾಗಿ, ದೇವದೂಷಣೆಯ ಸಮಯದಲ್ಲಿ ನ್ಯಾಯಾಧೀಶರು ಹೀಗೆ ಮಾಡಬೇಕಾಗಿತ್ತು.[19]

ಕಾಯಫನು ಆತನ ವಿರೋಧವಾಗಿ **ಹೆಚ್ಚು ಸಾಕ್ಷಿಗಳನ್ನು** ಕರೆತರುವ ಅವಶ್ಯಕತೆಯನ್ನು ಕಂಡುಕೊಂಡನು. ಅವನು ಯೇಸು ತಾನು ದೇವರ ಮಗನೆಂದು ಒಪ್ಪಿಕೊಳ್ಳುವದರ ಮೂಲಕ ದೇವದೂಷಣೆ ಮಾಡುತ್ತಾನೆ ಎಂದು ಪ್ರಕಟಿಸಿದನು. ಕಾಯಫನು ನೆರೆದು ಬಂದ ಇನ್ನುಳಿದ ಮಂಡಳಿಯ ಸದಸ್ಯರಿಗೆ ಅವರ ಅಭಿಪ್ರಾಯವನ್ನು ಕೇಳಿದಾಗ ಅವರು ಆತನು **ಮರಣದಂಡನೆ ಹೊಂದತಕ್ಕವನು! ಎಂದು ಉತ್ತರಕೊಟ್ಟರು.** ಮರಣದಂಡನೆಯನ್ನು ದೇವದೂಷಣೆಯ ಸಂದರ್ಭದಲ್ಲಿ ದೇವರು ವಿಧಿಸುತ್ತಿದ್ದನು (ಯಾಜಕಕಾಂಡ 24:10-16).

ಅಧಿಕೃತವಾಗಿ, ಒಬ್ಬ ಮನುಷ್ಯನ ಮೇಲೆ ಆತನು ದೇವರ ಹೆಸರಿನ ವಿರೋಧವಾಗಿ ಮಾತನಾಡದ ಹೊರತು ದೇವದೂಷಣೆಯ ಅಪವಾದವನ್ನು ಹೊರಿಸಲಾಗದು,[20] ಆದುದರಿಂದ ಮೆಸ್ಸೀಯನೆಂದು ಹೇಳಿಕೊಳ್ಳುವದು (ಸುಳ್ಳು ಹೇಳಿಕೆಯಾಗಿದ್ದರೂ, ಯೇಸುವನ್ನು ಬಿಟ್ಟು ಮರಣ ದಂಡನೆ ವಿಧಿಸಲಾಗದು) ಆದಾಗ್ಯೂ, ಯೆಹೂದ್ಯರು ನಂತರ ಹೇಳಿದರು, "ನಮಗೆ

ಒಂದು ನೇಮ ಉಂಟು, ಆ ನೇಮದ ಪ್ರಕಾರ ಇವನು ಸಾಯತಕ್ಕವನು; ಯಾಕೆಂದರೆ ಅವನು ತನ್ನನ್ನು ದೇವರ ಮಗನಾಗಿ ಮಾಡಿಕೊಂಡಿದ್ದಾನೆ" ಎಂದು ಉತ್ತರಕೊಟ್ಟರು (ಯೋಹಾನ 19:7).

**ವಚನಗಳು 67, 68.** ಯೇಸು ಅನ್ನನ ಮುಂದೆ ಕಾಣಿಸಿಕೊಂಡಾಗ ಒಬ್ಬ ಅಧಿಕಾರಿ ಆತನಿಗೆ ಪೆಟ್ಟುಕೊಟ್ಟನು ಯಾಕಂದರೆ ಅವನು ಮಹಾಯಾಜಕನನ್ನು ಪ್ರಶ್ನಿಸುವ ಧೈರ್ಯವನ್ನು ಮಾಡಿದನು (ಯೋಹಾನ 18:21, 22). ಯೇಸು ಕಾಯಫನ ಮುಂದೆ ನಿಂತಿರುವಾಗ ಆತನನ್ನು ಕೆಟ್ಟರೀತಿಯಲ್ಲಿ ನಡೆಸಿಕೊಳ್ಳುವದಕ್ಕೆ ಮತ್ತು ಹಿಂಸಿಸುವದಕ್ಕೆ ಮತ್ತೇ ಪ್ರಾರಂಭಿಸಿದರು.

ಅವರ ಕೃತ್ಯದಿಂದ, ಸನ್ಹೆದಿನ್ ಸಭೆ ಯೇಸುವನ್ನು ಮತ್ತು ಆತನ ಹೇಳಿಕೆಗಳನ್ನು ತಳ್ಳಿಬಿಟ್ಟಿತು. ಕೆಲವರು ಆತನ ಮುಖದ ಮೇಲೆ ಉಗುಳಿದರು ಅದು ಒಬ್ಬ ಯೆಹೂದಿಗೆ ಮಾಡಬಹುದಾದ ದೊಡ್ಡ ಅವಮಾನ. **ಉಗುಳಿ ಆತನನ್ನು ಗುದ್ದಿದರು; ಕೆಲವರು ಆತನ ಕೆನ್ನೆಗೆ ಏಟುಹಾಕಿದರು.** ಮಾರ್ಕ 14:65 ಈ ಮನುಷ್ಯರು ಅಧಿಕಾರಿಗಳಾಗಿದ್ದರು ಎಂದು ಹೇಳುತ್ತದೆ.

ಅವರು ಯೇಸುವಿನ ಕೆನ್ನೆಗೆ ಏಟು ಹಾಕುತ್ತಿರುವ ಹಾಗೆ, ಅವರು **ಕ್ರಿಸ್ತನೇ, ನಿನ್ನನ್ನು ಹೊಡೆದವರಾರು? ನಮಗೆ ಪ್ರವಾದನೆ ಹೇಳು ಅಂದರು.** ಮಾರ್ಕ ಮತ್ತು ಲೂಕ ಇಬ್ಬರು ಆ ಸಮಯದಲ್ಲಿ ಯೇಸುವಿನ ಕಣ್ಣುಗಳನ್ನು ಕಟ್ಟಿದ್ದರು ಎಂದು ಸೂಚಿಸುತ್ತಾರೆ (ಮಾರ್ಕ 14:65; ಲೂಕ 22:64), ಈ ವಿವರಣೆ ದೃಶ್ಯವನ್ನು ಸರಳವಾಗಿ ಅರ್ಥಮಾಡಿಕೊಳ್ಳಲು ಸಹಾಯಕ ವಾಗಿದೆ. ಅಧಿಕಾರಿಗಳು ಕುರುಡನ ನಿಷ್ಕಪಟತೆಯ ದ್ವಂದವನ್ನು ಯೇಸು ಪ್ರವಾದಿಯಾಗಿದ್ದಾನೆ ಎಂದು ಹಾಸ್ಯಮಾಡುತ್ತಿದ್ದರು. ಆತನು ನಿಜವಾಗಿಯು ಪ್ರವಾದಿಯಾಗಿದ್ದಲ್ಲಿ, ಆತನು ವ್ಯಕ್ತಿಯನ್ನು ನೋಡಲು ಅಸಮರ್ಥನಾಗಿದ್ದರು ಯಾವ ವ್ಯಕ್ತಿ ತನ್ನನ್ನು ಹೊಡೆಯುತ್ತಿದ್ದಾನೆ ಎಂದು ಹೆಸರಿಡಿದು ಗುರುತಿಸುತ್ತಾನೆ ಎಂದು ವಿವರಿಸಿದ್ದಾರೆ.

## ಪೇತ್ರನು ಅರಿಯನೆಂದು ಹೇಳಿದ್ದು (26:69-75)

**69ಇತ್ತಲಾಗಿ ಪೇತ್ರನು ಹೊರಗೆ ಅಂಗಳದಲ್ಲಿ ಕೂತಿದ್ದನು. ಅಲ್ಲಿ ಒಬ್ಬ ದಾಸಿಯು ಅವನ ಬಳಿಗೆ ಬಂದು - ನೀನು ಸಹ ಗಲಿಲಾಯದ ಯೇಸುವಿನ ಕೂಡ ಇದ್ದವನು ಅನ್ನಲು 70ಅವನು - ಅಲ್ಲ, ನೀನು ಏನನ್ನುತ್ತಿಯೋ ನನಗೆ ಗೊತ್ತಿಲ್ಲ ಎಂದು ಎಲ್ಲರ ಮುಂದೆ ಹೇಳಿದನು.**
**71ಅವನು ಅಲ್ಲಿಂದ ಬಾಗಲಿನ ಕಡೆಗೆ ಹೊರಟುಹೋದಾಗ ಮತ್ತೊಬ್ಬಳು ಅವನನ್ನು ಕಂಡು ಅಲ್ಲಿರುವವರಿಗೆ - ಇವನೂ ನಜರೇತಿನ ಯೇಸುವಿನ ಕೂಡ ಇದ್ದವನು ಎಂದು ಹೇಳಿದಳು.**
**72ಅವನು ತಿರಿಗಿ - ಅಲ್ಲ, ಆ ಮನುಷ್ಯನನ್ನು ನಾನರಿಯೆನು ಎಂದು ಆಣೆಯಿಟ್ಟುಕೊಂಡು ಹೇಳಿದನು. 73ಸ್ವಲ್ಪ ಹೊತ್ತಿನ ಮೇಲೆ ಅಲ್ಲಿ ನಿಂತವರು ಮುಂದೆ ಬಂದು ಪೇತ್ರನಿಗೆ - ನಿಶ್ಚಯವಾಗಿ ನೀನು ಸಹ ಅವರಲ್ಲಿ ಒಬ್ಬನು, ನಿನ್ನ ಭಾಷೆಯೇ ನಿನ್ನನ್ನು [ಗಲಿಲಾಯದವನೆಂದು] ತೋರಿಸಿಕೊಡುತ್ತದೆ ಎಂದು ಹೇಳಲಾಗಿ 74ಅವನು - ಆ ಮನುಷ್ಯನು ನಾನರಿಯೆನು ಎಂದು ಹೇಳಿ ಶಾಪಹಾಕಿಕೊಳ್ಳುವದಕ್ಕೂ ಆಣೆಯಿಟ್ಟುಕೊಳ್ಳುವದಕ್ಕೂ ಪ್ರಾರಂಭಿಸಿದನು. 75ಕೂಡಲೆ ಕೋಳಿ ಕೂಗಿತು. ಆಗ ಪೇತ್ರನು - ಕೋಳಿ ಕೂಗುವದಕ್ಕಿಂತ ಮುಂಚೆ ಮೂರು ಸಾರಿ ನನ್ನ ವಿಷಯವಾಗಿ ಅವನನ್ನು ಅರಿಯೆನೆಂಬದಾಗಿ ಹೇಳುವಿ ಎಂದು ಯೇಸು ಹೇಳಿದ ಮಾತನ್ನು ನೆನಸಿ ಹೊರಗೆ ಹೋಗಿ ಬಹು ವ್ಯಥೆಪಟ್ಟು ಅತ್ತನು.**

ವಚನ 68ರಲ್ಲಿರುವ ದೃಶ್ಯದ ನಂತರ ಯೇಸುವಿನ ಪ್ರವಾದನೆಯ ಸಾಮರ್ಥ್ಯವನ್ನು ತಿರಸ್ಕರಿಸಿ ಹಾಸ್ಯಮಾಡಲಾಯಿತು. ಮತ್ತಾಯನು ಯೇಸುವಿನ ಪ್ರವಾದನೆ ನೆರವೇರಿದ ದೃಶ್ಯವನ್ನು ಸೇರಿಸುತ್ತಾನೆ.[21] ಪೇತ್ರನು ಎಲ್ಲರೂ ಬಿಟ್ಟು ಹೋದರು, ತಾನು ಎಂದಿಗೂ ಯೇಸುವನ್ನು ಅಲ್ಲಗಳೆಯುವದಿಲ್ಲ ಎಂದು ಹೇಳಿದನು (26:33, 35). ಆದಾಗ್ಯೂ ಕರ್ತನು

ಅವನಿಗೆ, ಕೋಳಿ ಕೂಗುವದಕ್ಕಿಂತ ಮುಂಚಿತವಾಗಿ ಅವನು ತನ್ನನ್ನು ಅಲ್ಲಗಳೆಯುತ್ತಾನೆ ಎಂದು ಹೇಳಿದನು (26:34).[22] ಪೇತ್ರನು ತನ್ನ ಮಾತನ್ನು ನಡಿಸಿಕೊಡುವ ಉದ್ದೇಶವನ್ನು ಹೊಂದಿದ್ದನು. ಅವನು ಗೆತ್ಸೆಮನೆಯಲ್ಲಿ ತನ್ನ ಕರ್ತನಿಗಾಗಿ ಮರಣದ ಮಟ್ಟಿಗೂ ಹೋರಾಡಲು ಸಿದ್ಧನಾಗಿದ್ದನು (26:51). ಅಪೊಸ್ತಲನ ಮೊದಲಿನ ಸಮರ್ಪಣೆಗೆ ದೊಡ್ಡ ಆಪತ್ತನ್ನು ಎದುರಿಸಬೇಕಾಯಿತು ಪೇತ್ರನು ಹಿಂಸೆಯನ್ನು ಪ್ರತಿರೋಧಿಸಿದ್ಧರಿಂದ ಯೇಸು ಪೇತ್ರನನ್ನು ಗದರಿಸಿದನು (26:52-54).

**ವಚನ 69. ಪೇತ್ರನು ಹೊರಗೆ ಅಂಗಳದಲ್ಲಿ ಕೂತುಕೊಂಡು** ವೈರಿಗಳ ಬೆಂಕಿಯ ಬಳಿ "ಚಳಿಕಾಯಿಸಿಕೊಳ್ಳುತ್ತಾ" (ಮಾರ್ಕ 14:54), ಒಬ್ಬ ದಾಸಿ ಆತನು ಯೇಸುವಿನ ಶಿಷ್ಯರಲ್ಲಿ ಒಬ್ಬನೆಂದು ಗುರುತಿಸಿದಳು. ಅವಳು **ನೀನು ಸಹ ಗಲಿಲಾಯದ ಯೇಸುವಿನೊಂದಿಗೆ ಇದ್ದನಲ್ಲವೇ?** ಎಂದು ಕೇಳಿದಳು. ಯೇಸು ಗಲಿಲಾಯದಲ್ಲಿ ಬೆಳೆದದ್ದರಿಂದ ಮತ್ತು ತನ್ನ ಹೆಚ್ಚಾದ ಸೇವೆಯನ್ನು ಅಲ್ಲಿ ತೊಡಗಿಸಿಕೊಂಡದ್ದರಿಂದ ಯೆರೂಸಲೇಮಿನಲ್ಲಿ ಇದ್ದವರು ಆತನನ್ನು "ಗಲಿಲಾಯದವನು" ಎಂದು ಗುರುತಿಸುತ್ತಿದ್ದರು.

**ವಚನ 70.** ಆತನು ಯೇಸುವಿನೊಂದಿಗೆ ತನಗಿದ್ದ **ಕೂಡ** ಇರುವ ಸಂಬಂಧವನ್ನು ಅಲ್ಲಗಳೆದನು, **ನೀನು ಏನನ್ನುತ್ತಿಯೋ ನನಗೆ ಗೊತ್ತಿಲ್ಲ** ಅಂದನು. ಬಹುಶಃ ಭಯದಿಂದಾಗಿರಬಹುದು, ಅವನು ಹೊರಂಗಳಕ್ಕೆ ಹೋದನು (ಮಾರ್ಕ 14:68).[23]

**ವಚನ 71.** ಅತ್ಯಂತ ರಹಸ್ಯವಾದ ಸ್ಥಳವನ್ನು ಹುಡುಕುವ ಪೇತ್ರನ ಪ್ರಯತ್ನ ವಿಫಲವಾಯಿತು. **ಅವನು ಅಲ್ಲಿಂದ ಬಾಗಲಿನ ಕಡೆಗೆ ಹೊರಟುಹೋದಾಗ ಮತ್ತೊಬ್ಬಳು ಅವನನ್ನು ಕಂಡು ಅಲ್ಲಿರುವವರಿಗೆ - ಇವನೂ ನಜರೇತಿನ ಯೇಸುವಿನ ಕೂಡ ಇದ್ದವನು ಎಂದು ಹೇಳಿದಳು.** ಈ ಸಾರಿ ಯೇಸುವನ್ನು ಆತನ ಸ್ವಂತ ಊರಿನಿಂದ ಗುರಿತಿಸಲಾಗಿತ್ತು (ನೋಡಿರಿ 2:23).

**ವಚನ 72. ಅವನು ತಿರಿಗಿ** ಪೇತ್ರನು ಯೇಸುವನ್ನು **ಅಲ್ಲಗಳೆದನು,** ಮತ್ತು ಈ ಸಾರಿ ಆತನು ಆಣೆಯಿಡಲು ಪ್ರಾರಂಭಿಸಿದನು. **ಆ ಮನುಷ್ಯನನ್ನು ನಾನರಿಯೆನು** ಎಂದು ಹೇಳಿದನು. ಯೇಸುವನ್ನು ಹೆಸರಿಡುದು ಸಹ ಕರೆಯಲಿಲ್ಲ - ಅವನು ಅಪಮಾನ ವ್ಯಕ್ತಪಡಿಸುವಿಕೆಯನ್ನು ಉಪಯೋಗಿಸುತ್ತಾನೆ, ಪೇತ್ರನು ತಾನು ಯೇಸುವಿನ ಶಿಷ್ಯನೆಂಬುದನ್ನು ಮಾತ್ರ ಅಲ್ಲಗಳೆಯಲಿಲ್ಲ, ತಾನು ಯೇಸುವನ್ನು ಯಾರೆಂಬುದನ್ನು ಅರಿಯೆನು ಎಂಬ ಹೇಳಿಕೆಯನ್ನು ನೀಡುತ್ತಾನೆ. ಮತ್ತಾಯನು ಪೇತ್ರನು ಯಾವ ಆಣೆಯಿಟ್ಟನು ಎಂಬುದನ್ನು ನಿರ್ಧಿಷ್ಟವಾಗಿ ಹೇಳುವದಿಲ್ಲ.

**ವಚನ 73.** ಪೇತ್ರನು ದಾಸಿಯನ್ನು ಮೊದಲನೆಯ ಸಾರಿ ಎದುರಿಸಿದ್ದು ಮತ್ತು ಅಂತಿಮವಾಗಿ ಅಲ್ಲಗಳೆದದ್ದು ಎರಡು ಘಟನೆಗಳು ನಡೆದು ಒಂದು ಗಂಟೆ ಕಳೆದಿತ್ತು (ಲೂಕ 22:59). ಅಲ್ಲಿಯೇ ನಿಂತಿದ್ದ ಕೆಲವರು ಬಹಳ ಮಟ್ಟಿಗೆ ಏನು ನಡೆಯಿತು ಎಂಬುದನ್ನು ವೀಕ್ಷಿಸಿರಬಹುದು ಅವರು **ಪೇತ್ರನು** ಯೇಸುವಿನ ಮಾತಿನಿಂದಾಗಿ ಅವರು ಆತನು ಶಿಷ್ಯರಲ್ಲಿ ಒಬ್ಬನಾಗಿದ್ದಾನೆ ಎಂಬುದನ್ನು ಮನದಟ್ಟುಮಾಡಿಕೊಂಡರು. ಅಲ್ಲಿ ನಿಂತಿದ್ದವರು **ನಿನ್ನ ಭಾಷೆಯೇ ನಿನ್ನನ್ನು ತೋರಿಸಿಕೊಡುತ್ತದೆ ಎಂದು ಹೇಳಿದರು.** ಅವನ ಭಾಷೆಯಿಂದ ಅವನು ಸಹ ಗಲಿಲಾಯದವನೆಂದು ಅವರು ಹೇಳಬಹುದಾಗಿತ್ತು (ಮಾರ್ಕ 14:70).

ಹಳೆ ಒಡಂಬಡಿಕೆಯ ಸಮಯದಲ್ಲಿ, ಇಸ್ರಾಯೇಲ ಜನರು ಅವರು ವಾಸಿಸುವ ಕ್ಷೇತ್ರದ ಆಧಾರದ ಮೇಲೆ ಬೇರೆ ಬೇರೆ ಸ್ವರ ಉಚ್ಚಾರಣೆಯನ್ನು ಹೊಂದಿದ್ದರು (ನ್ಯಾಯಸ್ಥಾಪಕರು 12:1-6). ಮೊದಲನೆಯ ಶತಮಾನದಲ್ಲಿ ವ್ಯತ್ಯಾಸಗಳು ಮೂಲತಃ ಯಾದಾಯದಲ್ಲಿ ವಾಸಿಸುವರು (ದಕ್ಷಿಣಕ್ಕೆ) ಮತ್ತು ಗಲಿಲಾಯದಲ್ಲಿ ವಾಸಿಸುವವರ (ಉತ್ತರಕ್ಕೆ) ಮಧ್ಯದಲ್ಲಿತ್ತು.

**ವಚನ 74.** ಈ ಕೊನೆಗೆ ದೂರಿಗೆ ಪ್ರತ್ಯುತ್ತರವಾಗಿ, ಪೇತ್ರನು ಶಾಪಹಾಕಿಕೊಳ್ಳುವದಕ್ಕೂ ಆಣೆಯಿಟ್ಟುಕೊಳ್ಳುವದಕ್ಕು ಪ್ರಾರಂಭಿಸಿದನು, **ಆ ಮನುಷ್ಯನು ನಾನರಿಯೆನು!** ಎಂದು

ಹೇಳಿದನು. ಅವನು ಸತ್ಯವನ್ನು ಹೇಳಿದಿದ್ದರಿಂದ ದೇವರಿಂದ ತನ್ನ ಮೇಲೆ ಶಾಪವನ್ನು ಕೇಳಿಕೊಂಡನು (ನೋಡಿರಿ ರೂತಳು 1:17; 1 ಸಮುವೇಲ 3:17; 14:44; 20:13; 25:22). ಆತನು ತನ್ನ ಹೇಳಿಕೆಯನ್ನು ಸಮರ್ಥಿಸಿಕೊಳ್ಳುವದಕ್ಕೆ ಹೆಚ್ಚಿನ ಆಣೆಯನ್ನು ಇಡತೊಡಗಿದನು (ನೋಡಿರಿ 26:72). ಅಲ್ಲಗಳೆಯುವದು ಮತ್ತು ಆಣೆ ಒಟ್ಟಿಗೆ ಬರುವಾಗ, ಅವರು ಮೂರರಲ್ಲಿ ಒಂದು ಅಲ್ಲಗಳೆಯುವಿಕೆಯನ್ನು ಅಡಕಮಾಡಿಕೊಂಡರು. ಪೇತ್ರನ ಮೂರನೆಯ ಅಲ್ಲಗಳೆಯುವಿಕೆಯ ಸಮಯದಲ್ಲಿ **ತಕ್ಷಣ ಕೋಳಿ ಕೂಗಿತ್ತು.** ಇದು ಕರ್ತನು ಪ್ರವಾದಿಸಿದಂತೆಯೇ ನಡೆಯಿತು (26:34).[24]

**ವಚನ 75.** ಕೋಳಿ **ಕೂಗಿದ** ನಂತರ, "ಕರ್ತನು ತಿರುಗಿಕೊಂಡು ಪೇತ್ರನನ್ನು ನೋಡಿದನು" (ಲೂಕ 22:61). ಅದು ಎಂಥಹಾ ನೋಟವಾಗಿರಬಹುದು! **ಆಗ ಪೇತ್ರನು - ಕೋಳಿ ಕೂಗುವದಕ್ಕಿಂತ ಮುಂಚೆ ಮೂರು ಸಾರಿ ನನ್ನ ವಿಷಯವಾಗಿ ಅವನನ್ನು ಅರಿಯೆನೆಂಬದಾಗಿ ಹೇಳುವಿ** ಯೇಸು ಹೇಳಿರುವ ಮಾತುಗಳನ್ನು ಜ್ಞಾಪಿಸಿಕೊಂಡು ಅವನು ಮಾಡಿರುವದನ್ನು ಸ್ಪಷ್ಟವಾಗಿ ಗ್ರಹಿಸಿಕೊಂಡನು. ಬಹಳ ದುಖದಿಂದ ತುಂಬಿದವನಾಗಿ, **ನೆನಸಿ ಹೊರಗೆ ಹೋಗಿ ಬಹು ವ್ಯಥೆಪಟ್ಟು ಅತ್ತನು** (ನೋಡಿರಿ 2 ಕೊರಿಂಥ 7:10).

## ಪಾಠಗಳು

## ಪೇತ್ರನ ಬೀಳುವಿಕೆ ಮತ್ತು ಹಿಂತಿರುಗುವಿಕೆ (26:69-75)

ನಮ್ಮಲ್ಲಿ ಅನೇಕರು ಪೇತ್ರನೊಂದಿಗೆ ಹೋಲಿಸಬಹುದು. ಅವನು ಒಮ್ಮಲೇ ಪ್ರೇರಿತನಾಗುವಂತವನು, ಅನ್ವೇಷಣಾಶೀಲನು, ಒರಟಾದನು ಮತ್ತು ಬಲಹೀನನು ಆಗಿದ್ದನು. ಬೇರೆ ಯಾವ ವ್ಯಕ್ತಿಯೂ ಅಷ್ಟು ಎತ್ತರಕ್ಕೆ ಹೋಗಿದ್ದಾಗ್ಯೂ ಅಷ್ಟು ಕೆಳಕ್ಕೆ ಬಿದಿದ್ದಿಲ್ಲ. ಕರ್ತನೊಂದಿಗೆ ಅಷ್ಟೊಂದು ಆತ್ಮೀಯನಾಗಿದ್ದವನು ಆತನನ್ನು ಅರಿತಿದ್ದರು ಅಲ್ಲಗಳೆಯಲು ಹೇಗೆ ಸಾಧ್ಯ? ಅವನನ್ನು ಬೀಳುವಂತೆ ಮಾಡಿದ ಸಂಗತಿಗಳೇ ನಮ್ಮನ್ನು ಬೀಳುವಂತೆ ಮಾಡಬಹುದು.

*ಪೇತ್ರನ ಬೀಳುವಿಕೆಯ ಹಂತಗಳು.* ಪೇತ್ರನು ತಾನು ಎಷ್ಟು ಬಲಹೀನನಾಗಿದ್ದೇನೆ ಎಂಬುದನ್ನು ತಿಳಿದಿರಲಿಲ್ಲ (14:22-31; 16:21-23; 26:30-35; ಯೋಹಾನ 18:10, 11). ಅವನು ಶೋಧನೆಯಲ್ಲಿ ಬೀಳದಂತೆ ಪ್ರಾರ್ಥಿಸುತ್ತಾ ಇರಬೇಕಾದ ಸಮಯದಲ್ಲಿ ನಿದ್ದೆ ಮಾಡಿದನು (26:36-46), ಅವನು ಯೇಸುವಿಗಾಗಿ ತನ್ನ ಸಹೋದರರೊಂದಿಗೆ ಪ್ರಾರ್ಥಿಸುತ್ತಾ ಇರಬೇಕಾದ ಸಮಯದಲ್ಲಿ ದೂರದಿಂದ ಆತನನ್ನು ಹಿಂಬಾಲಿಸುತ್ತಿದ್ದನು (26:58), ಯೋಹಾನನ ಪರವಾಗಿ ಒಬ್ಬರಿಗೊಬ್ಬರು ಬೆಂಬಲವಾಗಿ ಇರಬೇಕಾದ ಸಮಯದಲ್ಲಿ ಅವನು ವೈರಿಗಳೊಂದಿಗೆ ಸೇರಿಕೊಂಡನು (22:55). ಈ ಕೆಳಗಿನ ಹಂತದಲ್ಲಿ, ಅವನು ಕರ್ತನನ್ನು ಅಲ್ಲಗಳೆದನು, ಆಣೆಗಳನ್ನು ಇಡುತ್ತಾ ತನ್ನ ಮೇಲೆ ಶಾಪವನ್ನು ಬರಮಾಡಿಕೊಳ್ಳತೊಡಗಿದನು (26:69-75).

*ಪೇತ್ರನ ಹಿಂತಿರುಗುವಿಕೆಯ ಹಂತಗಳು.* ಯೇಸುವಿನ ಒಂದು ನೋಟ ಪೇತ್ರನನ್ನು ಅಪೇಕ್ಷಿಸಿದ್ದರಿಂದ, ಆತನು ತಾನು ಮಾತನಾಡಿದ ಮಾತುಗಳನ್ನು ನೆನಪುಮಾಡಿಕೊಂಡನು (ಲೂಕ 22:61). ಪೇತ್ರನು ತೀಕ್ಷಣ ಪರಿತಾಪವುಳ್ಳವನಾಗಿದ್ದನು (ಲೂಕ 22:62) ಅವನು ನಿಜವಾಗಿ ಪಶ್ಚಾತ್ತಾಪಪಟ್ಟನು (ಯೋಹಾನ 21:15-19). ಅವನು ಸಾಯುವವರೆಗೆ ನಂಬಿಗಸ್ತನಾಗಿದ್ದನು (ನೋಡಿರಿ ಯೋಹಾನ 21:18, 19). ಬಲವಾದ ಸಂಪ್ರದಾಯವು ಪೇತ್ರನು ರೋಮಾಪಟ್ಟಣದಲ್ಲಿ ಕ್ರೂಜೆಯ ಮರಣವನ್ನು ಹೊಂದಿದನು ಎಂದು ಹೇಳುತ್ತದೆ.[25] ಆತನು ತನ್ನ ತಲೆಯನ್ನು ಕೆಳಗೆ ಮಾಡಿ ಕ್ರೂಜೆಗೆ ಹಾಕಬೇಕೆಂದು ಕೇಳಿಕೊಂಡನು ಯಾಕಂದರೆ ಅವನು ತನ್ನ ಒಡೆಯನನ್ನು ಕ್ರೂಜೆಗೆ ಹಾಕಿದ ರೀತಿಯಲ್ಲಿ ಹಾಕಿಸಿಕೊಳ್ಳಲು ತಾನು ಯೋಗ್ಯನಲ್ಲವೆಂದು ಪರಿಗಣಿಸಿಕೊಂಡನು.[26]

ಬಲವಾದ ಕ್ರೈಸ್ತರು ಸಹ ಮುಗ್ಗರಿಸಬಹುದು, ಆದರೆ ನಾವು ಬೀಳಬಾರದು. ನಂತರ, ಸಭೆಯಲ್ಲಿ ನಾಯಕನಂತೆ, ಪೇತ್ರನು ಕ್ರೈಸ್ತರಿಗೆ ಬೆಳೆಯಲು ಮತ್ತು ಮುಗ್ಗರಿಸುವದನ್ನು ದೂರವಿರಿಸಲು ಸಹಾಯವಾಗುವಂತೆ ಮಾರ್ಗದರ್ಶನಗಳನ್ನು ಬರೆದಿಟ್ಟನು (2 ಪೇತ್ರ 1:5-11).

---

ಟಿಪ್ಪಣಿಗಳು

[1]ರೋಮಾ ಸೈನಿಕರು ಯೇಸುವನ್ನು ಯೆಹೂದ್ಯ ಅಧಿಕಾರಿಗಳ ಬಳಿಗೆ ತೆಗೆದುಕೊಂಡು ಬಂದರುವ ನಿಭಾಂಶವು ಆಶ್ಚರ್ಯಗೊಳ್ಳುವಂಥದಲ್ಲ. ಇದಕ್ಕೆ ಸಮಾನವಾಗಿರುವ ಭಾಗವನ್ನು ಪೌಲನ ವಿಷಯದಲ್ಲಿಯೂ ನೋಡುತ್ತೇವೆ, ರೋಮನ ಸೈನ್ಯಾಧಿಕಾರಿ Claudius Lysiasನು ಪೌಲನನ್ನು ಹಿಡಿದು ಯೆಹೂದ್ಯರ ಮಹಾಸಭೆಗೆ ಪ್ರಶಿಸಲು ಒಪ್ಪಿಸಿದನು (ಅಪೊಸ್ತಲರ ಕೃತ್ಯಗಳು 22:30). [2]ರೋಮನ ಅಧಿಪತಿಯಾದ Pilateನ ಮುಂದೆ ಯೇಸುವಿನ ವಿರುದ್ಧವಾಗಿ ಹೇಳುವದಕ್ಕೆ ಅಧಿಕಾರವು ಕಾಯಫನಿಗೆ ಇತ್ತು ಅದು ಅನ್ನನಿಗೆ ಇರಲಿಲ್ಲ. [3]Mishnah *Sanhedrin* 1.1, 4, 5. [4]Ibid., 1.6. [5]Ibid., 4.3. [6]Ibid., 4.1. [7]Ibid., 11.2; *Middoth* 5.4. ಆದಾಗ್ಯೂ, ದೇವಾಲಯದ ಅಂಗಳದ ಹೊರಗಡೆ ಸಭೆ ಮೊದಲು ಸೇರಿ ಬರುವದನ್ನು ಈ ಸಾರಿ ಮಹಾ ಸಭೆಯ ಸ್ಥಳವನ್ನು ಬದಲಾವಣೆ ಮಾಡಿರಬಹುದು. ಹೆಚ್ಚಿನ ಮಾಹಿತಿಗಾಗಿ, ನೋಡಿರಿ Bruce Corley, “Trial of Jesus,” in *Dictionary of Jesus and the Gospels,* ed. Joel B. Green and Scot McKnight (Downers Grove, Ill.: InterVarsity Press, 1992), 851. [8]Mishnah *Sanhedrin* 4.1. [9]Ibid., 3.6; 5.3, 4. [10]Ibid., 4.1.

[11]ಈ ವಚನದಲ್ಲಿ, ಗ್ರೀಕ್ ಶಬ್ದ *(aulē)* “ಹೊರಾಂಗಣ” ಸೂಚಿಸುತ್ತದೆ, ಅರಮನೆಯಲ್ಲಿ (ನೋಡಿರಿ ವ್ಯಾಖ್ಯಾನ 26:3). [12]ನೋಡಿರಿ Talmud *Abodah Zarah* 8b. [13]Leon Morris, *The Gospel According to Matthew,* Pillar Commentary (Grand Rapids, Mich.: Wm. B. Eerdmans Publishing Co., 1992), 681. [14]Ibid., 683. [15]ನೋಡಿರಿ Mishnah *Shebuoth* 4.3. [16]ಮಹಾ ಸಭೆಯು ಬೆಳಗಿನ ಜಾವದಲ್ಲಿ ವಿಚಾರಣೆಗೆ ಕೂಡಿಬಂದಿರುವಾಗ ಯೇಸುವಿನ ಈ ಮಾತುಗಳನ್ನು ಈ ಮೂಲ ಪಾಠದಲ್ಲಿ ಲೂಕ ಜೋಡಿಸಿದ್ದಾನೆ (ಲೂಕ 22:66-71). ಯೇಸುವಿನ ರಾತ್ರಿಯ ವಿಚಾರಣೆಯಿಂದ ಬಹುಶ ಅವರು ಪುನರಾವರ್ತನೆ ಮಾಡಿರಬಹುದು. ರಾತ್ರಿ ವೇಳೆಯಲ್ಲಿ ಅವರು ಮಾಡಿದ ಅನಧಿಕೃತ ವಿಚಾರಣೆಯು ಅಧಿಕೃತವಾಗಿದೆಯೆಂದು ಹೇಳಲು ಬೆಳಗಿನ ಅಧಿವೇಶನ ದಲ್ಲಿ ಸೇರಿ ಬಂದಿರುವಾಗ ಯೆಹೂದ್ಯ ನಾಯಕರು ಪ್ರಯತ್ನ ಮಾಡುತ್ತಿದ್ದರೆಂದು ಸ್ಪಷ್ಟವಾಗುತ್ತದೆ. [17]Donald A. Hagner, *Matthew 14—28,* Word Biblical Commentary, vol. 33B (Dallas: Word Books, 1995), 801. [18]Jack P. Lewis, *The Gospel According to Matthew,* Part 2, The Living Word Commentary (Austin, Tex.: Sweet Publishing Co., 1976), 153. [19]Mishnah *Sanhedrin* 7.5. [20]Ibid.

[21]Morris, 687. [22]ಕೋಳಿ “ಎರಡು” ಸಾರಿ ಕೂಗುವ ಮುಂಚೆ ಪೇತ್ರನು ಮೂರು ಸಾರಿ ಯೇಸುವನ್ನು ನಿರಾ ಕರಿಸಿದನೆಂದು ಮಾರ್ಕ 14:30 ಹೇಳುತ್ತದೆ. [23]ಮಾರ್ಕ 14:68ರ ಕೆಲವು ಗ್ರೀಕ್ ಕೈ ಬರಹಗಳಲ್ಲಿ “ಕೋಳಿ ಕೂಗಿರುವದು” - ಅದು ಮೊದಲನೆಯ ಸಾರಿ ಎಂದು ಬರೆಯಲಾಗಿದೆ. (Bruce M. Metzger, *A Textual Commentary on the Greek New Testament,* 2d ed. [Stuttgart: German Bible Society, 1994], 97.) [24]ಮತ್ತೊಂದಾವರ್ತಿ ಮಾರ್ಕನು ಕೋಳಿ “ಎರಡು” ಸಾರಿ ಕೂಗಿತು ಎಂದು ವರದಿ ಮಾಡುತ್ತಾನೆ (ಮಾರ್ಕ 14:72). [25]Eusebius *Ecclesiastical History* 2.25. [26]ಪೇತ್ರ ಮತ್ತು ಪೌಲನ ಅಪೊಸ್ತಲರ ಕೃತ್ಯಗಳು.